ದಿನಾಂಕಃ 14-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ವೈ ಎಂ ಆರ್ ವಕೀಲರಿಂದ**

ನಾನು 1ನೇ ವಾದಿ ಮತ್ತು 1ನೇ ಪ್ರತಿವಾದಿಯ ಆಸ್ತಿಯ ಕ್ರಯಪತ್ರವನ್ನು ನೋಡಿದ್ದೀರ ಎಂದರೆ ಸಾಕ್ಷಿ 1ನೇ ವಾದಿಯ ಕ್ರಯಪತ್ರವನ್ನು ನೋಡಿದ್ದೆನೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಲ್ಲಿರುವಂತೆ ಸದರಿಯವರ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ರಂಗಪ್ಪನವರ ಮನೆ, ಪಶ್ಚಿಮಕ್ಕೆ ರಸ್ತೆ. ಉತ್ತರಕ್ಕೆ ದಾಸಪ್ಪನವರ 3 ವರೆ ಖಾಲಿ ಜಾಗ ಮತ್ತು ಹನುಮಂತಪ್ಪನವರ ಮನೆ, ದಕ್ಷಿಣಕ್ಕೆ ದೊಡ್ಡಹನುಮಂತಪ್ಪನವರ ಖಾಲಿ ಜಾಗ. ಸದರಿ ಕ್ರಯಪತ್ರವನ್ನು ನಾನು ವಾದಿ ಮತ್ತು ಪ್ರತಿವಾದಿಗಳ ನಡುವೆ ಆಸ್ತಿಯ ವಿಚಾರದ ಕುರಿತು ವಿವಾದ ಉಂಟಾದ ಸಮಯಕ್ಕೆ ನೋಡಿರುತ್ತೇನೆ. ನಾನು ನಿಪಿ-1 ರ ದಾಖಲೆಯನ್ನು ನೋಡಿದ್ದೆನೆ. ನಾನು ಈಗ ಹೇಳಿದ ಚೆಕ್ಕುಬಂದಿ ನಿಪಿ-1ರ ಷೆಡ್ಯೂಲ್ ಆಸ್ತಿಯಲ್ಲಿ ಇಲ್ಲ ಎಂದರೆ ನನಗೆ ಗೊತ್ತಾಗುತ್ತಿಲ್ಲ. ನಿಪಿ-1ನ್ನು ಹೊರತುಪಡಿಸಿ ಬೇರೆಯಾವುದೇ ದಾಖಲೆಯನ್ನು ನಾನು ನೋಡಿಲ್ಲ. ನಿಪಿ-1 ರಲ್ಲಿ ಇಲ್ಲದ ಚೆಕ್ಕುಬಂದಿಯನ್ನು ವಾದಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ವಾದಿಗಳ ಮತ್ತು ಪ್ರತಿವಾದಿಗಳ ಆಸ್ತಿಯನ್ನು ಅಳತೆ ಮಾಡಿಸಿದರೆ ನಿಜಸ್ಥಿತಿ ಗೊತ್ತಾಗುತ್ತದೆ ಎಂದರೆ ಸರಿ. ನಿಪಿ-1 ರಂತೆ ದಾಸಪ್ಪನವರು ಖರೀದಿ ಮಾಡಿದ ಆಸ್ತಿಯಲ್ಲಿ ಪೂರ್ಣ ವಿಸ್ತೀರ್ಣದಲ್ಲಿ ಮನೆ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿ ಉತ್ತರ ದಿಕ್ಕಿಗೆ 3 ವರೆ ಅಡಿ ಖಾಲಿ ಜಾಗ ಇದೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ವಾದಿ ಮತ್ತು ಪ್ರತಿವಾದಿಗಳ ಆಸ್ತಿಯನ್ನು ಅಳತೆ ಮಾಡಿಲ್ಲ, ಹಾಗಾಗಿ ಸದರಿಯವರ ಆಸ್ತಿಗಳ ವಸ್ತುಸ್ಥಿತಿಯನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಹಾಗಾಗಿ ವಾದಿಗಳಿಗೆ ಉತ್ತರ ದಿಕ್ಕಿನಲ್ಲಿ ಯಾವುದೇ ಆಸ್ತಿ ಇಲ್ಲದೆ ಇದ್ದರು ಸಹ ಸದರಿ ಯವರು ತಾವು ಖರೀದಿಸಿದ ಪೂರ್ಣ ವಿಸ್ತೀರ್ಣದ ಆಸ್ತಿಯಲ್ಲಿ ಮನೆ ಕಟ್ಟಿಕೊಂಡಿದ್ದರು ಸಹ ಸದರಿ ವಾದಿಗಳಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಗಳು ನನ್ನ ದೂರ ಸಂಬಂಧಿಕರು ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.